# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2067
ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಉತ್ತರಿಸುವ ದಿನಾಂಕ : 27.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಇತ್ತೀಚೆಗೆ ಹಿರಿಯ ನಾಗರೀಕರು ತಮ್ಮ ಜೀವನದ ಸಂಧ್ಯಾಕಾಲದಲ್ಲಿ ತಮ್ಮ ಕುಟುಂಬದವರಿಂದಲೇ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದಲ್ಲಿ ಇತ್ತೀಚೆಗೆ ಹಿರಿಯ ನಾಗರಿಕರು ತಮ್ಮ ಜೀವನದ ಸಂಧ್ಯಾಕಾಲದಲ್ಲಿ ತಮ್ಮ ಕುಟುಂಬದವರಿಂದಲೇ ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಸದರಿ ಹಿರಿಯ ನಾಗರೀಕರ ಸಹಾಯಕ್ಕಾಗಿ ಯಾವ ಯಾವ ಸೌಕರ್ಯಗಳನ್ನು ಕಾರ್ಯರೂಪಕ್ಕೆ ತರಲಾಗಿದೆ; | • ಕೇಂದ್ರ ಸರ್ಕಾರವು ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007ನ್ನು ಜಾರಿಗೊಳಿಸಿದ್ದು, ಇದನ್ನು ದಿನಾಂಕ:19.02.2009 ರಿಂದ ರಾಜ್ಯ ಸರ್ಕಾರದಲ್ಲಿ ಜಾರಿಗೊಳಿಸಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಸದರಿ ಕಾಯ್ದೆಯ ಪರಿಚ್ಛೇದ 7ರ ಉಪನಿಯಮ (1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರತಿ ಕಂದಾಯ ಉಪವಿಭಾಗದಲ್ಲಿ ಒಂದು ನ್ಯಾಯಮಂಡಳಿಯನ್ನು ಸ್ಥಾಪಿಸಲಾಗಿದೆ ಹಾಗೂ ಸದರಿ ಕಾಯ್ದೆಯ ಪರಿಚ್ಛೇದ 7ರ ಉಪನಿಯಮ (2) ರನ್ವಯ ನಿರ್ವಹಣಾ ಮಂಡಳಿಯ ಅಧ್ಯಕ್ಷರನ್ನಾಗಿ ಆಯಾ ಕಂದಾಯ ಉಪವಿಭಾಗದ ಉಪ ವಿಭಾಗಾಧಿಕಾರಿರವರನ್ನು ನೇಮಕ ಮಾಡಲಾಗಿದೆ.<br>• ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ-2007ರ ಪರಿಚ್ಛೇದ 7ರನ್ವಯ ಸ್ಥಾಪಿಸಿರುವ ನಿರ್ವಹಣಾ ನ್ಯಾಯಮಂಡಳಿಯ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಅಂಗೀಕರಿಸಲು ನಿಯಮ 15ರ ಉಪನಿಯಮ (1)ರ ಮೇರೆಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಪ್ರತಿ ಜಿಲ್ಲೆಗೆ ಒಂದರಂತೆ "ಮೇಲ್ಮನವಿ ನ್ಯಾಯಮಂಡಳಿ"ಯನ್ನು ಹಾಗೂ ಸದರಿ ಕಾಯ್ದೆಯ ಸೆಕ್ಷನ್ 15 ಉಪನಿಯಮ 2ರನ್ವಯ ಮೇಲ್ಮನವಿ ನ್ಯಾಯಮಂಡಳಿಯ ಅಧ್ಯಕ್ಷರನ್ನಾಗಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.<br>• ಪಾಲಕರ ಪೋಷಣೆ, ಸಂರಕ್ಷಣೆ ಹಾಗೂ ಹಿರಿಯ ನಾಗರಿಕರ ರಕ್ಷಣೆ ಕಾಯ್ದೆ 2007ರ ಕಾಯ್ದೆಯ ಪರಿಚ್ಛೇದ 18(1)ರನ್ವಯ ಆಯಾ ಜಿಲ್ಲೆಯ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರನ್ನು ನಿರ್ವಹಣಾಧಿಕಾರಿ ಗಳೆಂದು ಪದನಾಮಗೊಳಿಸಿ ಸರ್ಕಾರವು ದಿನಾಂಕ:13.09.2010 ರಂದು ಆದೇಶಿಸಿದೆ.<br>• ಸದರಿ ಕಾಯ್ದೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಾಜ್ಯ ಪರಿಷತ್ ಹಾಗೂ ಜಿಲ್ಲಾ ಮಟ್ಟದ ಸಮಿತಿಯನ್ನು ರಚಿಸಿ ದಿ:22.08.2011 ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. |

...2

| | | |
|---|---|---|
| | | • ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲ ಇಂತಹ ಅನೇಕ ಸಮಸ್ಯೆಗಳ ನಿವಾರಣೆಗಾಗಿ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿರುತ್ತದೆ. ಆದರೆ ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ. |
| ಇ | ರಾಜ್ಯದಲ್ಲಿ ಇರುವ ವೃದ್ಧಾಶ್ರಮಗಳ ಸಂಖ್ಯೆ ಎಷ್ಟು(ಜಿಲ್ಲಾವಾರು ಮಾಹಿತಿ ನೀಡುವುದು) | ಅನುಬಂಧ-1ರಲ್ಲಿ ಮಾಹಿತಿಯನ್ನು ಒದಗಿಸಲಾಗಿದೆ. |
| ಈ | ಕೆಲವು ಜಿಲ್ಲೆಯಲ್ಲಿ (NGO ಗಳು ನಡೆಸುತ್ತಿರುವ) ವೃದ್ಧಾಶ್ರಮ ಹೆಸರಿಗೆ ಮಾತ್ರ ಇದ್ದು, ಹಿರಿಯ ನಾಗರೀಕರಿಗೆ ಯಾವುದೇ ಸೌಲಭ್ಯ ನೀಡದೇ ಹಣ ಪಡೆಯುತ್ತಿರುವ ಬಗ್ಗೆ ವರದಿಯಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | 2019-20ನೇ ಸಾಲಿನಲ್ಲಿ ಹಿರಿಯ ನಾಗರಿಕರಿಗೆ ಯಾವುದೇ ಸೌಲಭ್ಯ ನೀಡದೆ ಇರುವ ವೃದ್ಧಾಶ್ರಮಗಳ ಬಗ್ಗೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| ಉ. | ಹಿರಿಯ ನಾಗರೀಕರ ಸಹಾಯವಾಣಿಗಳನ್ನು ರಾಜ್ಯದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ? | ಅನುಬಂಧ-2ರಲ್ಲಿ ಮಾಹಿತಿಯನ್ನು ಒದಗಿಸಲಾಗಿದೆ. |

**ಸಂಖ್ಯೆ: ಮಮಇ 96 ಪಿಹೆಚ್‌ಪಿ 2020**

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2067ಕ್ಕೆ ಅನುಬಂಧ-1

## ರಾಜ್ಯ ಅನುದಾನಿತ ವೃದ್ಧಾಶ್ರಮಗಳ ಮಾಹಿತಿ

| ಕ್ರ.ಸಂ. | ಜಿಲ್ಲೆಯ ಹೆಸರು | ವೃದ್ಧಾಶ್ರಮ ನಡೆಸುತ್ತಿರುವ ಸಂಸ್ಥೆಯ ಹೆಸರು (ಜಿಲ್ಲಾ ವಲಯದಡಿ) |
|---|---|---|
| 1 | ಬೆಂಗಳೂರು ನಗರ | ತುಂಗಭದ್ರ ವಿದ್ಯಾ ಸಂಸ್ಥೆ, (ರಿ) ನಂ 113, 2ನೇ ಕ್ರಾಸ್, 2ನೇ ಹಂತ ಮಹಾಲಕ್ಷ್ಮಿಪುರಂ, ಬೆಂಗಳೂರು-17 |
| 2 | ಬೆಂಗಳೂರು ನಗರ | ಚೆಶೈರ್ ಹೋಮ್ ಇಂಡಿಯಾ (ರಿ), ನಂ. 408, ಇಸಿಸಿ ರೋಡ್, ವಿಮಾನ ನಿಲ್ದಾಣ ರಸ್ತೆ ಮಣಿಪಾಲ ಆಸ್ಪತ್ರೆ ಎದುರು ಬೆಂಗಳೂರು-17 |
| 3 | ಬಳ್ಳಾರಿ | ಎಡಯೂರು ಶ್ರೀ ಸಿದ್ಧಲಿಂಗೇಶ್ವರ ವಿದ್ಯಾಪೀಠ, ರಾಮನಗರ, ಹಗರಿ ಬೊಮ್ಮನಹಳ್ಳಿ, ಬಳ್ಳಾರಿ |
| 4 | ಬೆಳಗಾವಿ | ಡಾ॥ ಬಿ.ಆರ್ ಅಂಬೇಡ್ಕರ್ ಹರಿಜನ ಸೊಸೈಟಿ, ಮುಚ್ಚಂಡಿ-590010, ಬೆಳಗಾಂ |
| 5 | ಬೀದರ್ | ರಮಬಾಯಿ ಅಂಬೇಡ್ಕರ್ ಮಹಿಳಾ ಮಂಡಳ ಜೌರಾದ್ .ಬಿ, ಬೀದರ್ |
| 6 | ಬಾಗಲಕೋಟೆ | ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ (ರಿ), ವೃದ್ಧಾಶ್ರಮ, ಬೀಳಗಿ ಬಾಗಲಕೋಟೆ |
| 7 | ವಿಜಯಪುರ | ಶ್ರೀ ಸಿದ್ಧೇಶ್ವರ ವಿದ್ಯಾಪೀಠ, (ರಿ) ತಾಳಿಕೋಟೆ, ಗುರುಪಾದೇಶ್ವರ ನಗರ, ಬಸವನ ಬಾಗೇವಾಡಿ ರೋಡ್, ಬಿಜಾಪುರ |
| 8 | ಚಿಕ್ಕಬಳ್ಳಾಪುರ | ಚೈತನ್ಯ ವೃದ್ಧಾಶ್ರಮ, ನಂದಾದೀಪ ಅಂಗವಿಕಲರ ಶಿಕ್ಷಣ ಮತ್ತು ಪುನಃಶ್ಚೇತನ ಸಂಸ್ಥೆ, ಕೈವಾರ, ಚಿಂತಾಮಣಿ ತಾ॥ ಚಿಕ್ಕಬಳ್ಳಾಪುರ |
| 9 | ಚಿಕ್ಕಮಗಳೂರು | ರೋಟರಿ ಅಂಡ್ ಇನ್ನರ್ ವ್ಹೀಲ್ ಟ್ರಸ್ಟ್, ಜೀವನಸಂಧ್ಯಾ ವೃದ್ಧಾಶ್ರಮ ಕದ್ರಿಮಿದ್ರಿ, ಮುಕ್ತಿಹಳ್ಳಿ ಅಂಚೆ, ಚಿಕ್ಕಮಗಳೂರು |
| 10 | ಚಿತ್ರದುರ್ಗ | ಶ್ರೀ ಶಕ್ತಿ ಮಹಿಳಾ ಮಂಡಳಿ, ಚಿತ್ರದುರ್ಗ |
| 11 | ಧಾರವಾಡ | ಶ್ರೀ ಮೈತ್ರಿ ಮಹಿಳಾ ಮಂಡಳ ವೃದ್ಧಾಶ್ರಮ, (ರಿ), ಎಸ್.ಜಿ. ಜಿಗಳೂರ ಬಿಲ್ಡಿಂಗ್, ಬಂಕಾಪುರ ಚೌಕ್, ಪಿ.ಬಿ ರೋಡ್, ಹುಬ್ಬಳ್ಳಿ ಅಂಡ್ ಬಿದ್ನಾಳ ಕ್ರಾಸ್, ಶಕ್ತಿನಗರ, ಹುಬ್ಬಳ್ಳಿ |
| 12 | ಗದಗ | ಜಿ.ಎಫ್ ಉಪನಾಳ ಪ್ರತಿಷ್ಠಾನ ಬೆಂಗಳೂರು ಶಾಖೆ: ಲಕ್ಷ್ಮೇಶ್ವರ ಶಾಂತಿಧಾಮ ವೃದ್ಧಾಶ್ರಮ, ಮುಕ್ತಿಮಂದಿರ ರೋಡ್ ಲಕ್ಷ್ಮೇಶ್ವರ |
| 13 | ಗುಲ್ಬರ್ಗಾ | ಮಹಾದೇವಿ ತಾಯಿ ಮಹಿಳಾ ವಿದ್ಯಾವರ್ಧಕ ಸಂಘ, ಕಲಬುರಗಿ |
| 14 | ಹಾಸನ | ಚೈತನ್ಯ ಮಂದಿರ ವೃದ್ಧಾಶ್ರಮ, ಗವೇನ ಹಳ್ಳಿ, ಹಾಸನ ತಾ॥ |
| 15 | ಹಾವೇರಿ | ಶ್ರೀ ಶಕ್ತಿ ಅಸೋಸಿಯೇಷನ್, ಗುತ್ತೂರು ಕಾಲೋನಿ, ಹರಿಹರ, ದಾವಣಗೆರೆ ಜಿಲ್ಲೆ ಇವರ ವತಿಯಿಂದ ನಾಗೇಂದ್ರ ಮಟ್ಟಿ ರೈಲ್ವೆ ಸ್ಟೇಷನ್ ಹತ್ತಿರ, ಹಾವೇರಿ. |
| 16 | ಕೋಲಾರ | ದಿವ್ಯಜ್ಯೋತಿ ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, (ರಿ), ಅರಿಶಿಣಕುಂಟೆ, ಮಾಣಿಗಾನ ಹಳ್ಳಿ ಅಂಚೆ ಶ್ರೀನಿವಾಸಪುರ ತಾ॥ ಕೋಲಾರ |
| 17 | ಕೊಪ್ಪಳ | ವಿದ್ಯಾನಂದ ಗುರುಕುಲ ವೃದ್ಧಾಶ್ರಮ, ಶಿಕ್ಷಣ ವಿಶ್ವಸ್ಥ ಮಂಡಲ, ಕೂಕನೂರು, ಕೊಪ್ಪಳ |
| 18 | ಮಂಡ್ಯ | ಸೇವಾಕಿರಣ ಚಾರಿಟಬಲ್ ಟ್ರಸ್ಟ್ ವೃದ್ಧಾಶ್ರಮ, ಶುಭಾಷ್ ನಗರ, ಮಂಡ್ಯ |
| 19 | ರಾಮನಗರ | ಶಾಂತಲಾ ಚಾರಿಟಬಲ್ ಟ್ರಸ್ಟ್, ರಾಮನಗರ ಸಂಸ್ಥೆ ವತಿಯಿಂದ ವಾರ್ಡ್ ಸಂ. 31, ಆರ್ಚಕರ ಹಳ್ಳಿ, ಬಿ.ಎಂ. ರಸ್ತೆಯಲ್ಲಿ ನಡೆಸುತ್ತಿರುವ ದಾರಿದೀಪ ವೃದ್ಧಾಶ್ರಮ |
| 20 | ಶಿವಮೊಗ್ಗ | ಜೀವನಕಿರಣ ವೃದ್ಧಾಶ್ರಮ, ಅಗರದ ಹಳ್ಳಿ, ಭದ್ರಾವತಿ ತಾ॥ ಶಿವಮೊಗ್ಗ ಜಿಲ್ಲೆ |

| | | |
|---|---|---|
| 21 | ತುಮಕೂರು | ಶ್ರೀಸ್ವಾಮಿ ಸರ್ವಧರ್ಮ ಶರಣಾಲಯ ಟ್ರಸ್ಟ್, (ರಿ), ಶ್ರೀ ಸಾಯಿ ವೃದ್ಧಾಶ್ರಮ, ಕಣವೇನಹಳ್ಳಿಗೇಟ್, ಪಾವಗಡ ತಾ॥ ತುಮಕೂರು ಜಿಲ್ಲೆ |
| 22 | ಮಡಿಕೇರಿ | – |
| 23 | ಯಾದಗಿರಿ | ಅಕ್ಷತಾ ಮಹಿಳಾ ಮಂಡಳಿ, ಯಾದಗಿರಿ |
| 24 | ಉತ್ತರ ಕನ್ನಡ | ಅಚೀವ್ ಸಂಸ್ಥೆ(ರಿ), ಅಂಕೋಲ, ಕಾರವಾರ. (ಆಡಳಿತಾತ್ಮಕ ಮಂಜೂರಾತಿ ದೊರಕಿರುವುದಿಲ್ಲ.) |
| 25 | ಚಾಮರಾಜನಗರ | ಜ್ಞಾನಸಿಂಧು ವೃದ್ಧಾಶ್ರಮ, ಜ್ಞಾನಸಿಂಧು ಎಜುಕೇಷನ್ ಅಂಡ್ ಕಲ್ಚರಲ್ ಸೊಸೈಟಿ, ಸಂತೇಮರಹಳ್ಳಿ, ಚಾಮರಾಜನಗರ |
| 26 | ದಕ್ಷಿಣ ಕನ್ನಡ | ಅಭಯ ಆಶ್ರಯ, (ರಿ) ಅಸೈಗೋಳಿ, ಕೊಣಾಜಿ, ಮಂಗಳೂರು |
| 27 | ಮೈಸೂರು | ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ, (ಜೆಎಸ್ಎಸ್) ನಂ. 915, 5ನೇ ಮೈನ್, ಅರವಿಂದ ನಗರ ರಾಮಾನುಜ ರಸ್ತೆ, ಮೈಸೂರು-570004 |
| 28 | ಉಡುಪಿ | ಸ್ಫೂರ್ತಿ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ, (ರಿ), ಕೋಟೇಶ್ವರ, ಉಡುಪಿ |
| 29 | ದಾವಣಗೆರೆ | ಮಹಾತ್ಮಗಾಂಧಿ ಎಜುಕೇಷನ್ ಸೊಸೈಟಿ, ದಾವಣಗೆರೆ |
| 30 | ರಾಯಚೂರು | ಸಂಕಲ್ಪ ಸಂಸ್ಥೆ, ಅಜಾದ್ ನಗರ, ರಾಯಚೂರು |

******

ಮಾನ್ಯ ವಿಧಾನ ಪರಿಷತ್ ಸದಸ್ಯರಾರ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 2067ಕ್ಕೆ ಅನುಬಂಧ-2

## ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು

| ಕ್ರ ಸಂ. | ಜಿಲ್ಲೆಯ ಹೆಸರು | ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ನಡೆಸುತ್ತಿರುವ ಸಂಸ್ಥೆಗಳ ಹೆಸರು ಮತ್ತು ವಿಳಾಸ |
|---|---|---|
| 1 | ಬೆಂಗಳೂರು ನಗರ | ನೈಟಿಂಗೇಲ್ ಮೆಡಿಕಲ್ ಟ್ರಸ್ಟ್, ನಂ.337, 2ನೇ ಕ್ರಾಸ್, 1ನೇ ಬ್ಲಾಕ್, ಆರ್.ಟಿ.ನಗರ, ಬೆಂಗಳೂರು 560 032 |
| 2 | ಬೆಂಗಳೂರು ಗ್ರಾಮಾಂತರ | ಸರ್ವೋದಯ ಸರ್ವಿಸ್ ಸೊಸೈಟಿ, ಎವರ್ ಗ್ರೀನ್ ಸ್ಕೂಲ್ ಹತ್ತಿರ, ವಿಜಯಪುರ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ |
| 3 | ಬಳ್ಳಾರಿ | ಸಮಗ್ರ ಸಾಮಾಜಿಕ ಹಾಗೂ ನೈತಿಕ ಅಭಿವೃದ್ಧಿ (ಸ್ಮೈಲ್) ಸಂಸ್ಥೆ, ಎ.ಪಿ.ಎಂ.ಸಿ ಹತ್ತಿರ, ಕುರುಗೋಡು 583116, ಬಳ್ಳಾರಿ |
| 4 | ಬೀದರ್ | ಡಾ:ಬಿ.ಆರ್.ಅಂಬೇಡ್ಕರ್ ಕಲ್ಚರಲ್ ಸೊಸೈಟಿ, ಹೆಚ್.ನಂ. 8.11.228, ಹೌಸ್ ಆಫ್ ಡಾನ್, ಕೆ.ಇ.ಬಿ ರಸ್ತೆ, ಬೀದರ್ |
| 5 | ಬಾಗಲಕೋಟೆ | ಶ್ರೀ ಕನಕದಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ತೆಗ್ಗಿ, ಬೀಳಗಿ ತಾಲ್ಲೂಕು, ಬಾಗಲಕೋಟೆ |
| 6 | ವಿಜಯಪುರ | ಮುಧೋಳ ಶಿವಯೋಗಿ ಶಿವಲಿಂಗೇಶ್ವರ ಶಿಕ್ಷಣ ಸಂಸ್ಥೆ, ಜೋಳದಪಕಾ, ಬಾಲ್ಕಿ ತಾಲ್ಲೂಕು, ಬೀದರ್ ಜಿಲ್ಲೆ |
| 7 | ಚಿಕ್ಕಬಳ್ಳಾಪುರ | ಶ್ರೀ ವಿಷ್ಣು ವಿದ್ಯಾ ಸಂಸ್ಥೆ, ಚೊಕ್ಕನಹಳ್ಳಿ, ಏನಿಗದಲೆ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. |
| 8 | ಚಿಕ್ಕಮಗಳೂರು | ಸೊಸೈಟಿ ಫಾರ್ ಪೀಪಲ್ ಇಂಟಿಗ್ರೇಟೆಡ್ ಡೆವಲಪ್‌ಮೆಂಟ್, (ರಿ), ಚಿಕ್ಕಮಗಳೂರು |
| 9 | ಚಿತ್ರದುರ್ಗ | ಶ್ರೀ ಬಸವೇಶ್ವರ ವಿದ್ಯಾಸಂಸ್ಥೆ (ರಿ), ಗಾರೆಹಟ್ಟಿ, ಲೋಕಾಯುಕ್ತ ಕಛೇರಿ, ಬಿ.ಡಿ.ರಸ್ತೆ, ಚಿತ್ರದುರ್ಗ ಜಿಲ್ಲೆ |
| 10 | ಧಾರವಾಡ | ವಿಶ್ವಧರ್ಮ ಮಹಿಳಾ ಮತ್ತು ಮಕ್ಕಳ ಶಿಕ್ಷಣ ಸೇವಾಶ್ರಮ ಸಮಿತಿ, ವೀರಾಪುರ ಓಣಿ, ಹಕ್ಕಲ ಹುಬ್ಬಳ್ಳಿ, ಧಾರವಾಡ |
| 11 | ಗದಗ | ಶ್ರೀ ಸಿದ್ದೇಶ್ವರ ವಿದ್ಯಾಪೀಠ (ರಿ) ತಾಳಿಕೋಟೆ, ಪೋಲೀಸ್ ಸ್ಟೇಷನ್ ರಸ್ತೆ, ಹತ್ತಿರ, ವಿಲ್ಲಟ ನಗರ, ತಾಳಿಕೋಟೆ, ವಿಜಯಪುರ ಜಿಲ್ಲೆ. |
| 12 | ಹಾಸನ | ಶರಾವತಿ ಎಜುಕೇಷನ್ ಸೊಸೈಟಿ, (ರಿ), ದಂಡಿಗನಹಳ್ಳಿ, ಚನ್ನರಾಯಪಟ್ಟಣ ತಾ: ಹಾಸನ ಜಿಲ್ಲೆ. |
| 13 | ಹಾವೇರಿ | ಜೋಶಿ ಚಾರಿಟೇಬಲ್ ಟ್ರಸ್ಟ್ (ರಿ), ಜೋಶಿ ಮನೆ, ರಾಘವೇಂದ್ರ ಮಠದ ಹತ್ತಿರ, ಹಾನಗಲ್, ಹಾವೇರಿ ಜಿಲ್ಲೆ |
| 14 | ಕೋಲಾರ | ದಿವ್ಯಜ್ಯೋತಿ ಎಜುಕೇಷನ್ & ಕಲ್ಚರಲ್ ಸೊಸೈಟಿ, ಅರಿಕುಂಟೆ ಗ್ರಾಮ, ಮಣಿಗಾನಹಳ್ಳಿ ಅಂಚೆ, ಶ್ರೀನಿವಾಸಪುರ ತಾ: ಕೋಲಾರ |
| 15 | ಕೊಪ್ಪಳ | ಶ್ರೀ ಸಿದ್ದೇಶ್ವರ ವಿದ್ಯಾಪೀಠ (ರಿ) ತಾಳಿಕೋಟೆ, ಪೋಲೀಸ್ ಸ್ಟೇಷನ್ ರಸ್ತೆ, ಹತ್ತಿರ, ವಿಲ್ಲಟ ನಗರ, ತಾಳಿಕೋಟೆ, ವಿಜಯಪುರ ಜಿಲ್ಲೆ. |
| 16 | ಮಂಡ್ಯ | ಅಕ್ಷಯ ನಿಕೇತನ ಟ್ರಸ್ಟ್ (ರಿ), ಸೊನಗಹಳ್ಳಿ, ಮಂಡ್ಯ ಜಿಲ್ಲೆ |

| | | |
|---|---|---|
| 17 | ರಾಮನಗರ | ಅಕ್ರೆಸೆಟ್ (ರಿ), ಗ್ರಾಮೀಣ ಶಿಕ್ಷಣ ಮತ್ತು ಸಮಾಜ ಪರಿವರ್ತನ ಸಂಸ್ಥೆ, ತಿಟ್ಟಮಾರನಹಳ್ಳಿ, ಚನ್ನಪಟ್ಟಣ ತಾಲ್ಲೂಕು, ರಾಮನಗರ |
| 18 | ಶಿವಮೊಗ್ಗ | ಲಲಿತಾ ಅಕಾಡೆಮಿ, ಪಾಪ್ಯುಲರ್ ರೈಸ್ ಮಿಲ್ ಹತ್ತಿರ, ಹೊನ್ನಾಳಿ ರಸ್ತೆ, ಶಿವಮೊಗ್ಗ |
| 19 | ತುಮಕೂರು | ಶ್ರೀ ರಾಮು ಫೌಂಡೇಷನ್ ಫಾರ್ ರೂರಲ್ ಆರ್ಗನೈಸೇಷನ್ (ರಿ), ನಂ.1616, 3ನೇ ಕ್ರಾಸ್, ಎಂ.ಜಿ.ರಸ್ತೆ, ತುಮಕೂರು |
| 20 | ಮಡಿಕೇರಿ | ಗ್ರೀನ್ ಗ್ಷ್ರಮ್ಬಿಣಾಭಿವೃದ್ಧಿ ತರಬೇತಿ ಸಂಸ್ಥೆ (ರಿ), ನಂ.238, ಪ್ರಜ್ಯೋನಿಜ ನಿಲಯ, ಜ್ಯೋತಿ ಸ್ಕೂಲ್ ಹತ್ತಿರ ನಿಮಿಷಾಂಬ ನಗರ, ಮೈಸೂರು. |
| 21 | ಯಾದಗಿರಿ | ಶ್ರೀ ಬಾಲಾಜಿ ಗ್ಷ್ರಮ್ಬಿಣಾಭಿವೃದ್ಧಿ ಮತ್ತು ಶಿಕ್ಷಣ ಸಂಸ್ಥೆ, ಅಂಬೇಡ್ಕರ್ ನಗರ, ಯಾದಗಿರಿ |
| 22 | ಉತ್ತರ ಕನ್ನಡ | ಶ್ರೀ ಮಲ್ಲಿಕಾರ್ಜುನ ಜನಸೇವಾ ಸೊಸೈಟಿ, ಬೆಳಗಾವಿ ಶಾಖೆ, ಕಾರವಾರ |
| 23 | ಚಾಮರಾಜನಗರ | ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ (ರಿ), ನಂ.22/62, 2ನೇ ತಿರುವು, ಭ್ರಮ್ಮರಂಭ ಬಡಾವಣೆ, ಚಾಮರಾಜನಗರ ಜಿಲ್ಲೆ. |
| 24 | ದಕ್ಷಿಣ ಕನ್ನಡ | ವಿಶ್ವಾಸ್ ಟ್ರಸ್ಟ್, ವೆಲೆನ್ಷಿಯಾ ಹಾಲ್ ರಸ್ತೆ, 4ನೇ ಅಡ್ಡರಸ್ತೆ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ |
| 25 | ಮೈಸೂರು | ಜೆ.ಎಸ್.ಎಸ್ ಮೆಡಿಕಲ್ ಸರ್ವಿಸ್ ಟ್ರಸ್ಟ್, ಜಗದ್ಗುರು ಡಾ: ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು |
| 26 | ಉಡುಪಿ | ಉಡುಪಿ ಮಹಿಳಾ ಮಂಡಳಿಗಳ ಒಕ್ಕೂಟ (ರಿ), ಉಡುಪಿ ಕೃಷ್ಣಕೃಪ ಕಾಂಪೌಂಡ್, ವಿಶ್ವಾಸ್ ಟವರ್ ಹತ್ತಿರ, ಕೋರ್ಟ್ ಹಿಂಬದಿ ರಸ್ತೆ, ಉಡುಪಿ |
| 27 | ದಾವಣಗೆರೆ | ಗಾಯಿತ್ರಿ ಗ್ರಾಮೀಣ ವಿದ್ಯಾಸಂಸ್ಥೆ (ರಿ), ಮಾಯಕೊಂಡ ದಾವಣಗೆರೆ |
| 28 | ರಾಯಚೂರು | ಸುರಕ್ಷಾ ಸಂಸ್ಥೆ, ಸ್ಟೇಷನ್ ಏರಿಯಾ, ಗುಡ್‌ಷಡ್ ರಸ್ತೆ, ರಾಯಚೂರು |

*****